ಆಸ್ಪತ್ರೆ ಕಟ್ಟಡದ ದುರಸ್ಥಿ

5167 (5328); ಶ್ರೀ ನಾರಾಯಣಸ್ವಾಮಿ ಎಸ್.ಎನ್. (ಬಂಗಾರಪೇಟೆ)

ಅ) ಕೋಲಾರ ಜಿಲ್ಲೆಯ ಕಮಲಾ ನೆಹರು ಕ್ಷಯ ರೋಗ ಆಸ್ಪತ್ರೆಯು ಜಿಲ್ಲಾ ಕುಟುಂಬ ಕಲ್ಯಾಣ ಇಲಾಖೆ ಕಛೇರಿಯ ಆವರಣದಲ್ಲಿದ್ದು, ಆಸ್ಪತ್ರೆ ಕಟ್ಟಡ ಮತ್ತು ಸರ್ಕಾರಿ ವಸತಿ ಗೃಹಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಆಸ್ಪತ್ರೆ ಕಟ್ಟಡ ಮತ್ತು ವಸತಿ ಗೃಹಗಳನ್ನು ದುರಸ್ಥಿಪಡಿಸಲು ಕೈಗೊಂಡ ಕ್ರಮವೇನು;

ಇ) ಸದರಿ ಆಸ್ಪತ್ರೆಯನ್ನು ಯಾವ ವರ್ಷದಲ್ಲಿ ನಿರ್ಮಾಣ ಮಾಡಲಾಗಿದೆ; ಆಸ್ಪತ್ರೆ ಹಾಗೂ ವಸತಿ ಗೃಹಗಳನ್ನೊಳಗೊಂಡಂತೆ ಆರೋಗ್ಯ ಇಲಾಖೆಗೆ ಸೇರಿದ ಜಾಗದ ವಿಸ್ತೀರ್ಣ ಎಷ್ಟು?

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಬಂದಿದೆ

ಆ) ಪ್ರಸ್ತುತ ಕೋಲಾರ ಜಿಲ್ಲೆಯ ಕಮಲ ನೆಹರು ಕ್ಷಯರೋಗ ಆಸ್ಪತ್ರೆಯನ್ನು ಮುಚ್ಚಲಾಗಿದೆ.

ಪ್ರಸ್ತುತ ಸದರಿ ಕಟ್ಟಡದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ ಹಾಗೂ ಇತರೆ ಜಿಲ್ಲಾ ಕಾರ್ಯಕ್ರಮ ಅಧಿಕಾರಿಗಳ ಕಛೇರಿಗಳು ಕಾರ್ಯನಿರ್ವಹಿಸುತ್ತಿವೆ. ಸದರಿ ಕಟ್ಟಡವನ್ನು ಕಾಲಕಾಲಕ್ಕೆ ಅವಶ್ಯಕತೆಗೆ ತಕ್ಕಂತೆ ದುರುಸ್ಥಿ ಪಡಿಸಲಾಗುತ್ತಿದೆ.

ವಸತಿಗೃಹಗಳು ಹಳೆಯದಾಗಿದ್ದು, ಶಿಥಿಲವಾಗಿರುವುದರಿಂದ ಯಾರು ವಾಸಿಸುತ್ತಿರುವುದಿಲ್ಲವಾದ್ದರಿಂದ ವಸತಿಗೃಹಗಳನ್ನು ದುರಸ್ಥಿ ಪಡಿಸಿರುವುದಿಲ್ಲ.

ಇ) ಸದರಿ ಆಸ್ಪತ್ರೆಯ ಕಟ್ಟಡವನ್ನು 1955–1959 ರಲ್ಲಿ ನಿರ್ಮಿಸಿ, ದಿ: 25–11–1959ರಲ್ಲಿ ಉದ್ಘಾಟನೆಗೊಂಡಿರುತ್ತದೆ. ಕಟ್ಟಡವಿರುವ ನಿವೇಶನವು ಕೋಲಾರ ತಾಲ್ಲೂಕಿನ ಗಾಜಲುದಿನ್ನೆ ಪ್ಲಾಂಟೇಶನ್ ರಾಜ್ಯ ಅರಣ್ಯ ಬ್ಲಾಕ್ "ಎ" ಸೇರಿದ ಗಾಜಲುದಿನ್ನೆ ಗ್ರಾಮದ ಸರ್ವೆ ನಂಬರ್: 12ಕ್ಕೆ ಸೇರಿದ್ದು, 22 ಎಕರೆ 36 ಗುಂಟೆ ವಿಸ್ತೀರ್ಣವನ್ನು ಹೊಂದಿರುತ್ತದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅನುದಾನ ದುರುಪಯೋಗ

5168 (5329); ಶ್ರೀ ನಾರಾಯಣಸ್ವಾಮಿ ಎಸ್.ಎನ್. (ಬಂಗಾರಪೇಟೆ)

ಅ) ಬಂಗಾರಪೇಟೆ ತಾಲೂಕಿನಲ್ಲಿ ದಿನಾಂಕ: 01–04–2013 ರಿಂದ 30–10–2015 ರವರೆಗೆ ಇಲಾಖೆಯಿಂದ ಕೈಗೊಂಡಿರುವ ಅಭಿವೃದ್ಧಿ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಯಾವುವು?

ಆ) ಸರ್ಕಾರದಿಂದ ಬಿಡುಗಡೆಯಾಗಿರುವ ಹಾಗೂ ಖರ್ಚಾಗಿರುವ ಅನುದಾನವೆಷ್ಟು? (ಸಂಪೂರ್ಣ ವಿವರ ನೀಡುವುದು)

ಇ) ಸರ್ಕಾರದಿಂದ ಕಾರ್ಯಕ್ರಮಗಳಿಗೆ ಬಿಡುಗಡೆಯಾಗಿರುವ ಅನುದಾನ ದುರ್ಬಳಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಎಷ್ಟು ದುರುಪಯೋಗವಾಗಿದೆ? (ಮಾಹಿತಿ ನೀಡುವುದು)

ಶ್ರೀಮತಿ ಉಮಾಶ್ರೀ (ಮಾನ್ಯ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲ ಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) ಯಾವುದೇ ಅಭಿವೃದ್ಧಿಕಾಮಗಾರಿಗಳು ಇರುವುದಿಲ್ಲ.

ಸಾಂಸ್ಕೃತಿಕ ಕಾರ್ಯಕ್ರಮಗಳು:

ದಿನಾಂಕ:1–4–2013 ರಿಂದ 30–10–2015ರ ವರೆಗೆ ಇಲಾಖೆಯಿಂದ ಕೈಗೊಂಡಿರುವ ಅಭಿವೃದ್ಧಿ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು